**ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಯಾದಗಿರಿ.**

**ಎಸ್.ಸಿ. 63/2025**

1. ಗುರುಮಠಕಲ್ ಪೊಲೀಸ ಠಾಣೆ .....ಫಿರ್ಯಾದಿ

ವಿರುದ್ಧ

1. ರಡ್ಡಿ @ ಸಾಬರಡ್ಡಿ ಮತ್ತು ಇತರರು .....ಆರೋಪಿತರು

ದೋಷಾರೋಪಣೆ

ನಾನು ಎ. ಈರಣ್ಣ ಎಮ್.ಕಾಂ. ಎಲ್.ಎಲ್.ಎಮ್ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಯಾದಗಿರಿ,

ಆರೋಪಿತರಾದ

1. ರಡ್ಡಿ @ ಸಾಬರಡ್ಡಿ ತಂದೆ ಸಿದ್ದಲಿಂಗಪ್ಪ ದುರ್ಗದೊರ, ವಯಸ್ಸುಃ 21 ವರ್ಷ, ಉದ್ಯೋಗಃ ಒಕ್ಕಲುತನ,
2. ನಾಗಪ್ಪ @ ನಾಗರಾಜ ತಂದೆ ಸಿದ್ದಲಿಂಗಪ್ಪ ದುರ್ಗದೊರ, ವಯಸ್ಸುಃ 20 ವರ್ಷ, ಉದ್ಯೋಗಃ ಒಕ್ಕಲುತನ,
3. ಭೀಮಪ್ಪ @ ತಂದೆ ಭೀಮಾಶಂಕರ ತಂದೆ ಸಿದ್ದಲಿಂಗಪ್ಪ ದುರ್ಗದೊರ, ವಯಸ್ಸುಃ 18 ವರ್ಷ, ಉದ್ಯೋಗಃ ಒಕ್ಕಲುತನ ಸಾಃ ಹತ್ತಿಕುಣಿ ತಾಃ ಜಿಃ ಯಾದಗಿರಿ.
4. ತಾಯಪ್ಪ ತಂದೆ ರಾಮಣ್ಣ ದುರ್ಗದೊರ, ವಯಸ್ಸುಃ 22 ವರ್ಷ, ಉದ್ಯೋಗಃ ಒಕ್ಕಲುತನ,
5. ರಾಮಣ್ಣ ತಂದೆ ಸಾರಬಣ್ಣ ದುರ್ಗದೊರ, ವಯಸ್ಸುಃ 46 ವರ್ಷ, ಉದ್ಯೋಗಃ ಒಕ್ಕಲುತನ,
6. ಸಿದ್ದಲಿಂಗಪ್ಪ ತಂದೆ ಸಾಬಣ್ಣ ದುರ್ಗದೊರ, ವಯಸ್ಸುಃ 56 ವರ್ಷ, ಉದ್ಯೋಗಃ ಒಕ್ಕಲುತನ,
7. ಹಣಮಂತ ತಂದೆ ಸಾಬಣ್ಣ ದುರ್ಗದೊರ, ವಯಸ್ಸುಃ 36 ವರ್ಷ, ಉದ್ಯೋಗಃ ಒಕ್ಕಲುತನ,
8. ಸಾಬಣ್ಣ ತಂದೆ ಮುಕ್ಕಪ್ಪ ದುರ್ಗದೊರ, ವಯಸ್ಸುಃ 34 ವರ್ಷ,

ಉದ್ಯೋಗಃ ಒಕ್ಕಲುತನ, (ಮೃತಪಟ್ಟಿರುತ್ತಾರೆ)

9. ಕಾಶಪ್ಪ ತಂದೆ ಮುಕ್ಕಪ್ಪ ದುರ್ಗದೊರ, ವಯಸ್ಸುಃ 41 ವರ್ಷ, ಉದ್ಯೋಗಃ ಒಕ್ಕಲುತನ

10. ಲಚಮಪ್ಪಾ @ ಲಕ್ಷ್ಮಣ ತಂದೆ ಮುಕ್ಕಪ್ಪ ದುರ್ಗದೊರ, ವಯಸ್ಸುಃ 30 ವರ್ಷ, ಉದ್ಯೋಗಃ ಒಕ್ಕಲುತನ

11. ಹಣಮಂತ ತಂದೆ ಶರಣಪ್ಪ ದುರ್ಗದೊರ, ವಯಸ್ಸುಃ 46 ವರ್ಷ, ಉದ್ಯೋಗಃ ಒಕ್ಕಲುತನ , ಸಾಃಎಲ್ಲರೂ ತಾತಳಗೇರಾ

ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತೇನೆ.

ಗುರುಮಠಕಲ್ ಪೊಲೀಸ ಠಾಣಾ ಹದ್ದಿಯ ಪೈಕಿ ತಾತಳಗೇರಾ ಗ್ರಾಮದಲ್ಲಿ ದಿಃ 17.7.2024 ರಂದು ಸಾಯಂಕಾಲ 7.15 ಗಂಟೆಗೆ ಸುಮಾರು ಚಾಸಾ-6 ರವರು ಅಲಾಯಿ ಆಡುತ್ತಿದ್ದಾಗ ಆರೋಪಿ 1 ಈತನು ಆಲಾಯಿ ಆಡುವಾಗ ಬೇಕು ಅಂತಾನೇ ಕಾಲು ತುಳಿದು ಆಕಾರಿ ಹೊಡೆದನು, ಆಗ ಚಾಸಾ.6 ಆರೋಪಿ 1 ಈತನಿಗೆ ನೋಡಿ ಆಲಾಯಿ ಆಡು ಅಂತಾ ಹೇಳಿದ್ದಕ್ಕೆ ಒಮ್ಮೆಲೆ ಸಿಟ್ಟಿಗೆ ಬಂದು ಆರೋಪಿತರಾದ ನೀವು ಏಕೋದ್ದೆದಿಂದ ಗುಂಪುಕಟ್ಟಿಕೊಂಡು ಬಂದಿದುವ್ದ, ಆ ಮೂಲಕ ನೀವು ಭಾರತೀಯ ನ್ಯಾಯಾ ಸಂಹಿತೆ ಕಲಂ.189(2) ಸಹವಾಚಕ 190 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

2. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಸದರಿ ಸ್ಥಳಕ್ಕೆ ಬಂದು ದೊಂಬಿ ಮಾಡಿದ್ದು, ಆ ಮೂಲಕ ನೀವು ಭಾರತೀಯ ನ್ಯಾಯಾ ಸಂಹಿತೆ ಕಲಂ.191(2) ಸಹವಾಚಕ 190 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

3. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಕೈಯಲ್ಲಿ ಬಡಿಗೆ ಹಿಡಿದುಕೊಂಡು ಬಂದು ದೊಂಬಿ ಮಾಡಿದ್ದು, ಆ ಮೂಲಕ ನೀವು ಭಾರತೀಯ ನ್ಯಾಯಾ ಸಂಹಿತೆ ಕಲಂ.191(3) ಸಹವಾಚಕ 190 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

4. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಚಾಸಾ-1 ಮತ್ತು 6 ರವರಿಗೆ ಕೈಯಿಂದ ಹೊಡೆಬಡಿ ಮಾಡಿ ಕಾಲಿನಿಂದ ಒದ್ದು, ಆ ಮೂಲಕ ಭಾರತೀಯ ನ್ಯಾಯಾ ಸಂಹಿತೆ ಕಲಂ. 115(2) ಸಹವಾಚಕ 190 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

5. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 4 ನೇ ಆರೋಪಿ ಕಟ್ಟಿಗೆಯಿಂದ ಚಾಸಾ-.1 ನೇದ್ದವನ ಬಲಗೈಗೆ ಹಾಗೂ ಮೈಗೆ ಹೊಡೆಬಡಿ ಮಾಡಿ ಸಾಧಾ ಸ್ವರುಪದ ಗಾಯಗೊಳಿಸಿದ್ದು, ಆ ಮೂಲಕ ಭಾರತೀಯ ನ್ಯಾಯಾ ಸಂಹಿತೆ ಕಲಂ. 118(2) ಸಹವಾಚಕ 190 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

6. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ನೇ ಆರೋಪಿ ಚಾಸಾ-6 ರವರಿಗೆ ಕೊಲೆ ಮಾಡುವ ಉದ್ದೇಶದಿಂದ ಕಟ್ಟಿಗೆಯಿಂದ ಬಲವಾಗಿ ಆತನ ತಲೆಗೆ ಹೊಡೆದು ಭಾರಿ ಸ್ವರೂಪದ ರಕ್ತಗಾಯ ಮಾಡಿದ್ದು, ಆ ಮೂಲಕ ಭಾರತೀಯ ನ್ಯಾಯಾ ಸಂಹಿತೆ ಕಲಂ. 109 ಸಹವಾಚಕ 190 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

7. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ನೇ ಆರೋಪಿ ಚಾಸಾ-1, 6 ರವರಿಗೆ ಇನ್ನೊಮ್ಮೆ ಸಿಕ್ರೆ ನಿಮಗೇ ಒಬ್ಬೊಬ್ಬರನ್ನ ಖಲಾಸ ಮಾಡಿ ಬಿಡುತಿವಿ ಅಂತಾ ಜೀವದ ಬೆದರಿಕೆ ಹಾಕಿದ್ದು, ಆ ಮೂಲಕ ಭಾರತೀಯ ನ್ಯಾಯಾ ಸಂಹಿತೆ ಕಲಂ. 351(2) ಸಹವಾಚಕ 190 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

8. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಚಾಸಾ-1 ಮತ್ತು 6 ರವರಿಗೆ ಲೇ ಸೂಳೆ ಮಕ್ಕಳೆ ಅಂತಾ ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಮೂಲಕ ಭಾರತೀಯ ನ್ಯಾಯಾ ಸಂಹಿತೆ ಕಲಂ. 352 ಸಹವಾಚಕ 190 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

ಈ ಮೇಲೆ ಹೇಳಿರುವ ಆಪಾದನೆಗಳಿಗೆ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸಬೇಕೆಂದು ಇಂದು ದಿನಾಂಕಃ 07.03.2026 ರಂದು ಆದೇಶಿಸಿದ್ದೇನೆ.

ಸ್ಥಳಃ- ಯಾದಗಿರಿ

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಯಾದಗಿರಿ.